SN – 008

# III ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ ನವೆಂಬರ್/ಡಿಸೆಂಬರ್ 2010
## (ಫ್ರೆಶರ್ ಸ್ಕೀಮ್)
## ಕನ್ನಡ ಭಾಷೆ – III
## ವ್ಯಾವಹಾರಿಕ ಕನ್ನಡ ಮತ್ತು ಸಾಹಿತ್ಯ ಸಂವಾದ – 2

Time : 3 Hours                                                    Max. Marks : 90

### ಭಾಗ - ೧
### ವ್ಯಾವಹಾರಿಕ ಕನ್ನಡ

I. ಅ) ಮೂರು ಪ್ರಶ್ನೆಗಳಿಗೆ ಉತ್ತರಿಸಿ : **(3×10=30)**

1) ವ್ಯಾವಹಾರಿಕ ಪತ್ರದ ವಿವಿಧ ಅಂಗಗಳನ್ನು ವಿವರಿಸಿ. ಮಾದರಿ ಪತ್ರವೊಂದನ್ನು ರಚಿಸಿ.

2) ವಿಚಾರಣಾ ಪತ್ರ ಎಂದರೇನು ? ವಿಧಗಳು ಹಾಗೂ ಅದರ ಸ್ವರೂಪವನ್ನು ವಿವರಿಸಿ.

3) ಅಭ್ಯರ್ಥನ ಪತ್ರ ಎಂದರೇನು ? ಸ್ವವಿವರಗಳೊಂದಿಗೆ, ವಾಣಿಜ್ಯ ಶಾಸ್ತ್ರದ ಉಪನ್ಯಾಸಕ ಹುದ್ದೆಗೆ ಅರ್ಜಿಯೊಂದನ್ನು ಸಿದ್ಧಪಡಿಸಿ.

4) ಆಹ್ವಾನ ಪತ್ರಿಕೆಯ ಲಕ್ಷಣಗಳು ಯಾವುವು ? ಕಾರ್ಯಕ್ರಮ ಪಟ್ಟಿಯೊಂದಿಗೆ ಗಣರಾಜ್ಯೋತ್ಸವ ಸಮಾರಂಭದ ಆಹ್ವಾನ ಪತ್ರಿಕೆ ಸಿದ್ಧಪಡಿಸಿ.

5) ವಿದ್ಯಾರ್ಥಿಗಳು ಕಾಲೇಜಿನೊಂದಿಗೆ ಪತ್ರ ವ್ಯವಹಾರ ನಡೆಸುವ ಸಂದರ್ಭಗಳು ಯಾವುವು ? ಶುಲ್ಕವನ್ನು ಕಂತಿನಲ್ಲಿ ಪಾವತಿಸಲು ಕೋರಿ ಪ್ರಾಂಶುಪಾಲರಿಗೆ ಒಂದು ಪತ್ರವನ್ನು ಬರೆಯಿರಿ.

ಆ) ನಾಲ್ಕಕ್ಕೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ : **(4×5=20)**

1) ಆದೇಶ ಪತ್ರ

2) ಕಾರ್ಯಸೂಚಿ

3) ಸುತ್ತೋಲೆ

4) ಓದುಗರ ಅನಿಸಿಕೆಯ ಅಂಕಣ

5) ಪ್ರತ್ಯುತ್ತರ ಪತ್ರ

6) ಸಾರ್ವಜನಿಕ ಕುಂದು ಕೊರತೆ ಬಗ್ಗೆ, ದೂರು.

## ಭಾಗ - ೨

## ಸಾಹಿತ್ಯ ಸಂವಾದ

II. ಅ) **ಎರಡು** ಪ್ರಶ್ನೆಗಳಿಗೆ ತಾರ್ಕಿಕ ಆಲೋಚನೆ ಆಧರಿಸಿ ಉತ್ತರಿಸಿ : **(2×5=10)**

1) 'ದುರ್ಯೋಧನನೆಂಬ ಪೆಸರ್ಗೆ ಮುಯ್ಯಾಂಪೆನೇ ?' ಎಂದು ದುರ್ಯೋಧನ ತಮ್ಮನ ಶವದ ಮುಂದೆ ಹೇಳುವ ಈ ಮಾತನ್ನು ಹೇಗೆ ಗ್ರಹಿಸುವಿರಿ ?

2) ಸಾವಿಗೆ ಸಿಲುಕದ ಬುಡಾಣ ಸಾಬರ ವ್ಯಕ್ತಿತ್ವಕ್ಕೂ , ಕಥೆಯಲ್ಲಿನ ಸಾವಿನ ವಿವರಗಳಿಗೂ ಯಾವ ರೀತಿಯ ಸಂಬಂಧವನ್ನು ಕಲ್ಪಿಸಬಹುದು ? ವಿವರಿಸಿ.

3) 'ಪಂಚ ಭೂತಗಳನ್ನು ಕೊಳ್ಳುವವರು' ಇದು ಯಾವ ಬಗೆಯ ಗ್ರಾಹಕ ಸಂಸ್ಕೃತಿಯನ್ನು ಸೂಚಿಸುತ್ತದೆ ?

4) ಕುಪ್ಪಣ್ಣ ಭಟ್ಟರ ಮಾತು, ಮೌನಗಳಲ್ಲಿ ವ್ಯಕ್ತವಾಗುವ ಸ್ವಭಾವ ಲಕ್ಷಣಗಳನ್ನು ಚರ್ಚಿಸಿ.

ಆ) **ಎರಡು** ಪ್ರಶ್ನೆಗಳಿಗೆ ವಿವರಣಾತ್ಮಕ ಉತ್ತರ ಬರೆಯಿರಿ : **(2×5=10)**

1) ಆಟ ಮತ್ತು ಸಾವು, 'ಆಟ' ಕಥೆಯಲ್ಲಿ ಹೇಗೆ ಸಮೀಕರಣಗೊಂಡಿದೆ ?

2) 'ಆ ಮನಿ' ನಾಟಕ ಸಾವಿನ ಕಥೆಯನ್ನು ಹೇಳುತ್ತಲೇ ಬದುಕಿನ ಕಡೆಗೂ ಕರೆದೊಯ್ಯುತ್ತದೆ ಹೇಗೆ ? ವಿವರಿಸಿ.

3) ವಾಣಿಜ್ಯ ಸಂಸ್ಕೃತಿಯ ದುರಂತದ ಪರಿಣಾಮ, 'ಸಂತೆ' ಕವಿತೆಯ 'ಕನಸು ಬೀಳುವುದಿಲ್ಲ ಬರಿಗೈಲಿ' ಎಂಬ ಈ ಸಾಲಿನಲ್ಲಿ ಹೇಗೆ ವ್ಯಕ್ತವಾಗಿದೆ ?

4) ಮನುಷ್ಯ ಸಂಬಂಧಗಳನ್ನು ಹಣ ಹೇಗೆ ನಿಯಂತ್ರಿಸುತ್ತದೆ ? ಮೌನಿ ಕಥೆಯ ಹಿನ್ನೆಲೆಯಲ್ಲಿ ವಿವರಿಸಿ.

ಇ) **ಎರಡು** ಪ್ರಶ್ನೆಗಳಿಗೆ ಸ್ವಂತ ಆಲೋಚನೆ/ ಅನುಭವಗಳ ಹಿನ್ನೆಲೆಯಲ್ಲಿ ವಿಶ್ಲೇಷಣಾತ್ಮಕ ಉತ್ತರ ಬರೆಯಿರಿ : **(2×10=20)**

1) ಪ್ರೀತಿ ಪಾತ್ರರಾದವರ ಸಾವಿನ ನೆನಪುಗಳು, ಮನುಷ್ಯನನ್ನು ಹೇಗೆ ಕಾಡುತ್ತವೆ ? ದುರ್ಯೋಧನ ವಿಲಾಪಂ ಪದ್ಯದ ಹಿನ್ನೆಲೆಯಲ್ಲಿ ವಿವರಿಸಿ.

2) 'ಅಡಕೆಗೆ ಹೋದ ಮಾನ, ಆನೆ ಕೊಟ್ಟರೂ ಬರದು' ಎಂಬ ಗಾದೆ ಮಾತನ್ನು 'ಅಡಕೆಯ ಮಾನ ' ಲೇಖನಕ್ಕೆ ಅನ್ವಯಿಸಿ ವಿಶ್ಲೇಷಿಸಿ.

3) ಮಾತಿನ ಮೋಡಿಯ ಮುಂದೆ, ಮೌನದ ನಿಷ್ಠುರತೆ, ಪ್ರಾಮಾಣಿಕತೆಗಳು ಮಂಕಾಗುವ ರೀತಿಯನ್ನು ಕುಪ್ಪಣ್ಣ ಭಟ್ಟರ ಹಿನ್ನೆಲೆಯಲ್ಲಿ ವಿವರಿಸಿ.

4) ಕರ್ಣ ಹಾಗೂ ಅಭಿಮನ್ಯುವಿನ ಹೆಣಗಳ ಮುಂದೆ ದುರ್ಯೋಧನನ ವ್ಯಕ್ತಿತ್ವದ ಘನತೆ ಹೇಗೆ ವ್ಯಕ್ತವಾಗುತ್ತದೆ ? ವಿಶ್ಲೇಶಿಸಿ.

---

# III ಸೆಮಿಸ್ಟರ್ ಬಿ.ಕಾಂ. ಪರೀಕ್ಷೆ ನವೆಂಬರ್/ಡಿಸೆಂಬರ್ 2010
## (Repeaters Scheme)
## ಕನ್ನಡ ಭಾಷೆ – III
## ಹೊಸಗನ್ನಡ ಕಾವ್ಯ ಮತ್ತು ವ್ಯಾವಹಾರಿಕ ಕನ್ನಡ

Time : 3 Hours                                                                 Max. Marks : 90

ಭಾಗ – ೧

I. ಅ) ಒಂದರ ಭಾವವನ್ನು ವಿವರಿಸಿ : **(1×5=5)**

1) ಕಡಲುಗಳ್ಳರ ಕಾಟ ಕೊನೆಗೊಂಡರೇನಂತೆ
ಒಡಲುಗಳ್ಳರು ಇನ್ನು ಇಲ್ಲೆ ಇಹರೊ
ರೈತ ಮಕ್ಕಳು ಬಯಸಿ ಬೆಳೆದ ಬೆಳಸನು ಸುಲಿದು
ಸುಖಪಡುವ ರಕ್ಕಸರು ನಡುವೆ ಇಹರೊ.
ನರನಸ್ಥಿಪಂಜರದ ಅಡಿಗಲ್ಲ ಮೇಲಿವರು
ಸುಸ್ಥಿರವು ಎನುವಂಥ ಭವನಗಳನು
ನಿರ್ಮಿಸುವ ಕ್ರೂರಜನ, ತೂಗಲೆಂದೇ ಬಂದು
ಕೂಸಕೊರಳನೆ ಹಿಸುಕಲೆಳಸುತಿಹರು.

2) ಇಲ್ಲಿ ನಡೆವುದೊಂದಕ್ಕೂ ನನಗೂ ಸಂಬಂಧವಿಲ್ಲ
ಈ ಬಾಳಿನ ಚೆಲುವಿನಿಂದ ನನಗೇನಾನಂದವಿಲ್ಲ;
ಗುಡಿಗೋಪುರ ರಾಜ್ಯ ಕಾವ್ಯಶಾಸ್ತ್ರಜ್ಞರು ಬರಲಿ ಮುಂದೆ
ಮೇರೆಮೀರಿ ಮುಂಬಂದರೆ 'ಅಪ್ಪಳಿಸುವೆ' ನೆನುವಳೀಕೆ

ಆ) ಎರಡನ್ನು ಸಂದರ್ಭ ಸಹಿತ ವಿವರಿಸಿ : **(2×3=6)**

1) ಜಲಪಾತಗಳಲ್ಲಿ ಧುಮ್ಮಿಕ್ಕುವುದು ಇವನ ನಗೆ
2) ಅಪ್ಪನ ಬೆವರಿನ ರಕ್ತವು ಸೋರಿ ಕೆಂಪಾದುವು ಹೂವು
3) ಬೇನೆಯರಿಯದ ಬಂಜೆಯರು
4) ಎಲ್ಲರಿಗೂ ದಕ್ಕುವ ಎಲಚಿಯಾಗು

ಇ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ : **(2×2=4)**

1) ಸು.ರಂ. ಎಕ್ಕುಂಡಿ
2) ಕೆ. ಷರೀಫಾ
3) ಅಹಲ್ಯೆ
4) ಬಂಡಾಯ

II. ಒಂದು ಪ್ರಶ್ನೆಯನ್ನು ಕುರಿತು ಸಂಕ್ಷಿಪ್ತ ಉತ್ತರ ಬರೆಯಿರಿ : **(1×5=5)**

1) ನಿಮ್ಮೊಡನಿದ್ದೂ ನಿಮ್ಮಂತಾಗದೆ- ಕವನದ ಪರಕೀಯ ಪ್ರಜ್ಞೆ.

2) 'ಮಂಥನ' – ಮುಕ್ತಕಗಳಲ್ಲಿ ವ್ಯಕ್ತವಾಗಿರುವ ಜೀವನಾನುಭವ.

III. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರವನ್ನು ಬರೆಯಿರಿ : **(2×10=20)**

1) ಮುದಿಯ ರಾಮಗೌಡ- ಕವನದಲ್ಲಿ ಪ್ರೇಮ ಮತ್ತು ಕರ್ತವ್ಯಗಳ ಇಕ್ಕಟ್ಟಿನಲ್ಲಿ ಸಿಲುಕಿದ ಹೆಣ್ಣಿನ ಮನಸ್ಥಿತಿಯನ್ನು ವಿವೇಚಿಸಿ.

2) 'ಬತ್ತಲಾರದ ಗಂಗೆ' ಕವನದಲ್ಲಿ ಭಾರತೀಯ ಸಂಸ್ಕೃತಿಯ ಬಗೆಗಿನ ಕವಿಯ ಚಿಂತನೆಯನ್ನು ಪರಿಶೀಲಿಸಿ.

3) 'ಬೆಂದ ಮನಸ್ಸಿಗೆ ಬೆಂಜಮಿನ್', 'ಇಂಡಿಯಾದ ನಿಬಿಡಾರಣ್ಯಗಳಲ್ಲಿ', 'ನನ್ನ ನಾಯಿ' – ಇವುಗಳಲ್ಲಿ ಎರಡರ ಆಶಯವನ್ನು ಬರೆಯಿರಿ.

4) 'ತುತ್ತಿನ ಚೀಲ' ಕವನದಲ್ಲಿ ಹಸಿವಿನ ದಾರುಣತೆ ಮತ್ತು ಅದರ ಪರಿಣಾಮಗಳು ಹೇಗೆ ಚಿತ್ರಿತವಾಗಿವೆ ? ಚಿಂತಿಸಿ.

## ಭಾಗ – ೨

IV. ಸಂವಹನ ಮಾಧ್ಯಮಗಳೆಂದರೇನು ? ಯಾವುದಾದರೂ ಎರಡು ಮಾಧ್ಯಮಗಳನ್ನು ಕುರಿತು ಬರೆಯಿರಿ : **(1×10=10)**

V. ಒಂದು ವಾಣಿಜ್ಯ ಪತ್ರದ ವಿನ್ಯಾಸವನ್ನು ಉದಾಹರಣೆಯೊಂದಿಗೆ ವಿವರಿಸಿ. **(1×10=10)**

**ಅಥವಾ**

ಉತ್ತಮ ವಾಣಿಜ್ಯಪತ್ರದ ಗುಣಲಕ್ಷಣಗಳನ್ನು ವಿವರಿಸಿ.

VI. ಸೂಕ್ತ ಉದಾಹರಣೆಗಳ ಮೂಲಕ ವಿಕ್ರಯಕ್ಕೆ ಸಂಬಂಧಿಸಿದ ವಿಚಾರಣಾ ಪತ್ರ ಮತ್ತು ಉತ್ತರವನ್ನು ಬರೆಯಿರಿ. **(1×10=10)**

**ಅಥವಾ**

ಪರಾಮರ್ಶನ ಪತ್ರ ಎಂದರೇನು ? ಒಂದು ಪ್ರತಿಕೂಲ ಪರಾಮರ್ಶನ ಪತ್ರದ ಮಾದರಿಯೊಂದನ್ನು ರಚಿಸಿ.

VII. ಸಮಾಧಾನ ಪತ್ರವೆಂದರೇನು ? ಅದನ್ನು ಬರೆಯುವ ಸಂದರ್ಭ ಮತ್ತು ಅಗತ್ಯವನ್ನು ವಿವರಿಸಿರಿ. **(1×10=10)**

**ಅಥವಾ**

ಆಧುನಿಕ ಪ್ರಪಂಚದಲ್ಲಿ ಬ್ಯಾಂಕುಗಳಿಗಿರುವ ಸ್ಥಾನವೇನು ? ವಿವರಿಸಿ.

VIII. ನಾಲ್ಕನ್ನು ಕುರಿತು ಟಿಪ್ಪಣಿ ಬರೆಯಿರಿ : **(4×2½=10)**

1) ಪತ್ರದ ಒಡಲು

2) ನೀಡಿಕೆ ಪತ್ರ

3) ವೃತ್ತ ಪತ್ರಿಕೆಗಳು

4) ಆದೇಶ ಪತ್ರ

5) ಠೇವಣಿಗಳು

6) ಹಣದ ರವಾನೆ.

---